## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ನಾಗರಾಜು ಇವರ ಶೂನ್ಯವೇಳೆ ಪ್ರಸ್ತಾಪಕ್ಕೆ ಸರ್ಕಾರದ ಉತ್ತರ.

**(ದಿನಾಂಕ: 17.03.2025, ಕ್ರಮ ಸಂಖ್ಯೆ-3)**

**ವಿಷಯ:-**

ದಿನಾಂಕ: 15.03.2025ರಂದು "ತೆರಿಗೆಗೂ ಮಂಗಳೂರು ವಿವಿಯಲ್ಲಿ ದುಡ್ಡಿಲ್ಲ" ಎಂದು ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. "ರಾಜ್ಯದ ಹಳೆಯ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಮಂಗಳೂರು ವಿವಿಯಲ್ಲಿ ಪಿಂಚಣಿಗಾಗಿ ಇಟ್ಟಿದ್ದ ಮೂಲ ನಿಧಿ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಇಟ್ಟಿದ್ದ ನಿಧಿಯಲ್ಲಿನ ಅನುದಾನವೂ ಖಾಲಿ. ಸ್ಥಳೀಯ ಗ್ರಾಮ ಪಂಚಾಯಿತಿ ತೆರಿಗೆಯನ್ನೂ ಕಟ್ಟಲಾಗದಷ್ಟು ಆರ್ಥಿಕ ಸಂಕಷ್ಟ ಹೊರಗುತ್ತಿಗೆ ನೌಕರರಿಗೂ ವೇತನ ನೀಡಲಾಗದ ಸ್ಥಿತಿ ತಲುಪಿದೆ.

ನಿವೃತ್ತ ನೌಕರರಿಗೆ ಪಿಂಚಣಿ, ಹಾಲಿ ಇರುವ ಹೊರಗುತ್ತಿಗೆ ನೌಕರರು, ಅತಿಥಿ ಉಪನ್ಯಾಸಕರಿಗೆ ವೇತನ ನೀಡಲೂ ಆಗದ ಗಂಭೀರ ಆರ್ಥಿಕ ಸಂಕಷ್ಟಕ್ಕೆ ಬಂದು ನಿಂತಿರುವ ಮಂಗಳೂರು ವಿವಿಯು ಶೈಕ್ಷಣಿಕವಾಗಿಯೂ ಬೋಧಕರ ನೇಮಕ ಮಾಡಿಕೊಳ್ಳಲಾಗದೆ ಒಂಭತ್ತಕ್ಕೂ ಅಧಿಕ ಕೋರ್ಸ್‌ಗಳನ್ನು ಮುಚ್ಚಿದೆ. 2022 ರಿಂದ 2024ರವರೆಗೆ ಕೊಣಾಜೆ ಗ್ರಾಮ ಪಂಚಾಯಿತಿ ನೋಟಿಸ್ ನೀಡಿದರೂ ಆದಾಯ ಇಲ್ಲದ ಕಾರಣಕ್ಕೆ 40 ಲಕ್ಷ ರೂ. ನಷ್ಟು ತೆರಿಗೆ ಬಾಕಿ ಉಳಿಸಿಕೊಂಡಿದೆ. ವಿವಿ ನಿರ್ವಹಣೆಗೆ ಅಗತ್ಯ ಆದಾಯ ಕ್ರೋಢಿಕರಿಸಲು ವಿವಿ ಸಭಾಂಗಣವನ್ನೇ ಮದುವೆ ಸಮಾರಂಭಗಳಿಗೆ ಬಾಡಿಗೆ ನೀಡಲಾರಂಭಿಸಿರುವುದು ದಿವಾಳಿ ಹಂತ ತಲುಪಿರುವುದಕ್ಕೆ ಹಿಡಿದ ಕೈ ಗನ್ನಡಿ. ತನ್ನ ಸಂಯೋಜನೆಯಲ್ಲಿದ್ದ ಕೊಡಗು ಜಿಲ್ಲೆಯ 26 ಕಾಲೇಜುಗಳನ್ನು ಸೇರಿಸಿ ಹಿಂದಿನ ಸರ್ಕಾರ ಪ್ರತ್ಯೇಕ ವಿವಿ ಸ್ಥಾಪಿಸಿತು. ಇದರಿಂದ ವಿದ್ಯಾರ್ಥಿಗಳ ಸಂಖ್ಯೆಯೂ ಕುಸಿಯಿತು. ಇದು ಮೊದಲೇ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ವಿವಿಯ ಆಂತರಿಕ ಆದಾಯ ತೀವ್ರವಾಗಿ ಕುಸಿಯುವಂತೆ ಮಾಡಿದೆ. ಯಾವ ಹಂತಕ್ಕೆ ಎಂದರೆ ತನ್ನದೇ ಘಟಕ ಕಾಲೇಜುಗಳನ್ನೂ ಮುಚ್ಚುವ ಸ್ಥಿತಿಗೆ ತಂದು ನಿಲ್ಲಿಸಿದೆ" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ರಾಜ್ಯದಲ್ಲಿ ಹಲವಾರು ಸರ್ಕಾರಿ ವಿಶ್ವವಿದ್ಯಾಲಯಗಳು ಇದೇ ರೀತಿಯ ಆರ್ಥಿಕವಾಗಿ ಸಂಕಷ್ಟ ಎದುರಾಗಿದ್ದು, ಈ ಕುರಿತು ಉನ್ನತ ಶಿಕ್ಷಣ ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮವೇನು ಮತ್ತು ಈ ವಿವಿಗಳನ್ನು ಉಳಿಸಿಕೊಳ್ಳಲು ಸರ್ಕಾರ ಯಾವ ಯೋಜನೆಗಳನ್ನು ಜಾರಿಗೆ ತಂದಿದೆ ಎಂಬ ಪ್ರಸ್ತಾಪದ ಕುರಿತು.

**ಉತ್ತರ:-**

ಮಂಗಳೂರು ವಿಶ್ವವಿದ್ಯಾನಿಲಯವು ಪ್ರಸ್ತುತ ಪ್ರತಿ ತಿಂಗಳು ಈ ಕೆಳಗಿನಂತೆ ನಿಗಧಿತ ವೆಚ್ಚಗಳನ್ನು ಭರಿಸಲಾಗುತ್ತಿದೆ:-

| ಕ್ರ. ಸಂ | ವೆಚ್ಚದ ವಿವರ (ತಿಂಗಳುವಾರು) | ಅಂದಾಜು ವೆಚ್ಚ (ರೂ.) |
|---|---|---|
| 1. | ಅತಿಥಿ ಉಪನ್ಯಾಸಕರುಗಳ ಸಂಭಾವನೆ (ವಿಶ್ವವಿದ್ಯಾನಿಲಯ ಆವರಣ, ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟ, ಮಂಗಳೂರು, ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ/ಬನ್ನಡ್ಕ/ಎಫ್.ಎಂ.ಕೆ.ಎಂ.ಸಿ/ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ) –ಒಟ್ಟು 268 ಮಂದಿ | 1,00,00,000.00 |
| 2. | ತಾತ್ಕಾಲಿಕ ಉದ್ಯೋಗಿಗಳ ಸಂಭಾವನೆ - ಒಟ್ಟು 211 ಮಂದಿ | 35,00,000.00 |
| 3. | ಹೊರಗುತ್ತಿಗೆ ಸೇವೆಗಳು (ಭದ್ರತೆ/ ಶುಚಿತ್ವ/ ಗ್ರೂಪ್ ಡಿ/ ತೋಟಗಾರಿಕೆ) – ಒಟ್ಟು 161 ಮಂದಿ | 34,00,000.00 |
| 4. | ಮಾಸಿಕ ಪಿಂಚಣಿ ಯೋಜನೆಗೆ ವಿ.ವಿ ವಂತಿಗೆ (14%) | 19,00,000.00 |
| 5. | ಸರ್ಕಾರದಿಂದ ಪಾವತಿಯಾಗುತ್ತಿರುವ ಪಿಂಚಣಿ ಅನುದಾನದಲ್ಲಿ ಕೊರತೆ ಬೀಳುವ ಮೊತ್ತ | 1,60,00,000.00 |
| 6. | ಪರೀಕ್ಷಾ/ಇತರ ವೆಚ್ಚಗಳು | 1,00,00,000.00 |
| | ಒಟ್ಟು ಅಂದಾಜು ವೆಚ್ಚ | 4,48,00,000.00 |
| | ಅಂದಾಜು ವಾರ್ಷಿಕ ವೆಚ್ಚ | 53,76,00,000.00 |

ಮಂಗಳೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳ ಪ್ರಕಾರ ಕಳೆದ 3 ವರ್ಷಗಳ ಆಂತರಿಕ ಸಂಪನ್ಮೂಲಗಳ ವಿವರ ಈ ಕೆಳಗಿನಂತಿದೆ:-

| ಕ್ರ.ಸಂ | ಆರ್ಥಿಕ ವರ್ಷ | ಆದಾಯ (ರೂ.) | ಖರ್ಚು (ರೂ) |
|---|---|---|---|
| 1. | 2021-22 | 67,22,47,460.19 | 70,81,96,618.48 |
| 2. | 2022-23 | 63,06,13,177.40 | 72,38,41,135.54 |
| 3. | 2023-24 | 58,29,99,663.71 | 58,80,83,055.71 |

ಮುಂದುವರಿದು, ದೂರ ಶಿಕ್ಷಣ ಕೋರ್ಸುಗಳ ರದ್ದತಿ, ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಪ್ರಾರಂಭ, ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಇತ್ಯಾದಿಗಳು ವಿಶ್ವವಿದ್ಯಾನಿಲಯದ ಆರ್ಥಿಕ ಸಂಪನ್ಮೂಲದ ಮೇಲೆ ಋಣಾತ್ಮಕ ಪರಿಣಾಮವನ್ನು ಬೀರಿದೆ. ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿದ್ದ ಹಲವಾರು ಸಂಯೋಜಿತ ಕಾಲೇಜುಗಳು ಸ್ವಾಯತ್ತ ಸ್ಥಾನಮಾನವನ್ನು ಪಡೆದುಕೊಂಡಿರುವುದರಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸದರಿ ಕಾಲೇಜುಗಳಿಂದ ಲಭಿಸುವ ಆದಾಯವು ಗಣನೀಯವಾಗಿ ಕಡಿಮೆಯಾಗಿರುತ್ತದೆ

ಬೋಧಕ/ಬೋಧಕೇತರ ಸಿಬ್ಬಂದಿಗಳ ವಯೋನಿವೃತ್ತಿಯಿಂದಾಗಿ ತೆರವಾಗಿರುವ ಹುದ್ದೆಗಳನ್ನು ಖಾಯಂ ನೆಲೆಯಲ್ಲಿ ಭರ್ತಿಗೊಳಿಸದಿರುವುದರಿಂದ, ವಿಶ್ವವಿದ್ಯಾನಿಲಯದ ದೈನಂದಿನ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅತಿಥಿ ಉಪನ್ಯಾಸಕರ ಹಾಗೂ ತಾತ್ಕಾಲಿಕ ನೌಕರರ ಸೇವೆಯನ್ನು ಮಾಸಿಕ ಸಂಭಾವನೆ ಆಧಾರದಲ್ಲಿ ಬಳಸಿಕೊಂಡು ಬರಲಾಗುತ್ತಿದ್ದು, ಈ ವೆಚ್ಚವನ್ನು ವಿಶ್ವವಿದ್ಯಾನಿಲಯವು ಆಂತರಿಕ ಸಂಪನ್ಮೂಲದಿಂದ ಭರಿಸಲಾಗುತ್ತಿದೆ.

2006ರ ನಂತರ ವಿಶ್ವವಿದ್ಯಾನಿಲಯದ ಸೇವೆಗೆ ಸೇರಿದ ಖಾಯಂ ನೌಕರರ NPS 14% ವಂತಿಗೆಯನ್ನು ವಿಶ್ವವಿದ್ಯಾನಿಲಯವು ತನ್ನ ಆಂತರಿಕ ಸಂಪನ್ಮೂಲದಿಂದ ಭರಿಸುತ್ತಿದೆ. 2023-24ನೇ ಸಾಲಿನಲ್ಲಿ ಪಿಂಚಣಿಗಾಗಿ ಸದರಿ ಆರ್ಥಿಕ ವರ್ಷದಲ್ಲಿ ರೂ.10.00 ಕೋಟಿಯನ್ನು ಒದಗಿಸಲಾಗಿತ್ತು. ಈ ಉದ್ದೇಶಕ್ಕಾಗಿ ಹೆಚ್ಚುವರಿಯಾಗಿ ಫೆಬ್ರುವರಿ-2025ರಲ್ಲಿ ರೂ.11.30ಕೋಟಿಯನ್ನು ಬಿಡುಗಡೆ ಮಾಡಿ 2023-24ನೇ ಸಾಲಿನಲ್ಲಿ ನಿವೃತ್ತರಾದ ಸಿಬ್ಬಂದಿಗಳಿಗೆ ಪಾವತಿಸಲು ಬಾಕಿಯಿರುವ ಪಿಂಚಣಿ ಸೌಲಭ್ಯಗಳನ್ನು ನೀಡಲು ಸೂಚನೆ ನೀಡಲಾಗಿದೆ. 2023-24ನೇ ಸಾಲಿನಲ್ಲಿ ನಿವೃತ್ತರ ಮಾಸಿಕ ಪಿಂಚಣಿಗಾಗಿ ಆಂತರಿಕ ಸಂಪನ್ಮೂಲದಿಂದ ರೂ.16.62 ಕೋಟಿ ಭರಿಸಿರುವುದಲ್ಲದೇ ಸದರಿ ಆರ್ಥಿಕ ವರ್ಷದಲ್ಲಿ ನಿವೃತ್ತರಾದ ಸಿಬ್ಬಂದಿಗಳಿಗೆ ರೂ. 11.30 ಕೋಟಿ ಮೊತ್ತವನ್ನು ಬಳಸಿದ ನಂತರ ಇನ್ನೂ ರೂ.4.10ಕೋಟಿ ಮೊಬಲಗು ಪಾವತಿಸಲು ಬಾಕಿಯಿದೆ ಹಾಗೂ 2024-25ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು ರೂ.10.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಮಾಸಿಕ ಪಿಂಚಣಿಗಾಗಿ 2024-25ರಲ್ಲಿ ರೂ.19.18 ಕೋಟಿ ಆಂತರಿಕ ಸಂಪನ್ಮೂಲದಿಂದ ಭರಿಸಲಾಗಿದೆ. ಪ್ರಸ್ತುತ ಆಂತರಿಕ ಸಂಪನ್ಮೂಲದ ಕೊರತೆ ಇರುತ್ತದೆ. ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿಯಲ್ಲಿ ಪ್ರಸ್ತುತ ಯಾವುದೇ ಹೂಡಿಕೆಗಳು ಇರುವುದಿಲ್ಲ ಹಾಗೂ ವಿಶ್ವವಿದ್ಯಾನಿಲಯದ ನಿಧಿಗೆ ಯಾವುದೇ ಶುಲ್ಕಗಳು ನಿರೀಕ್ಷಿತ ಪ್ರಮಾಣದಲ್ಲಿ ಜಮೆಯಾಗುತ್ತಿಲ್ಲ. ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳನ್ನು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರ ಸಂಭಾವನೆ, ತಾತ್ಕಾಲಿಕ ಸಿಬ್ಬಂದಿಗಳ ವೇತನ ಹಾಗೂ ಪಿಂಚಣಿ ಪಾವತಿಗೆ ಬಳಸಬೇಕಾಗಿರುವುದರಿಂದ ಪಂಚಾಯತ್ ತೆರಿಗೆ ಪಾವತಿ, ಪರೀಕ್ಷಾ ಕಾರ್ಯಗಳ ವೆಚ್ಚಗಳು, ಇತರ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಒಟ್ಟು ಅಂದಾಜು ರೂ.25.00 ಕೋಟಿಗಳಷ್ಟು ಬಿಲ್ಲುಗಳು ಪಾವತಿಗೆ ಬಾಕಿಯಿರುತ್ತದೆ.

ಆದ್ದರಿಂದ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆರ್ಥಿಕ ಮಿತವ್ಯಯ ಸಾಧಿಸಲು ಈ ಕೆಳಗಿನಂತೆ ಕ್ರಮಕೈಗೊಳ್ಳಲಾಗಿದೆ:-

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ/ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸಲು ಬಳಸಿಕೊಂಡಿರುವ ಸಿಬ್ಬಂದಿಗಳಲ್ಲಿ ಒಟ್ಟು 142 ಸಿಬ್ಬಂದಿಗಳನ್ನು 2024ರಲ್ಲಿ ಬಿಡುಗಡೆಗೊಳಿಸಲಾಗಿದ್ದು ವಾರ್ಷಿಕ ರೂ.5.52 ಕೋಟಿ ಮಿತವ್ಯಯ ಸಾಧಿಸಲಾಗಿರುತ್ತದೆ.

2. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ 268 ಸಂಖ್ಯೆ ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು ಅವರ ಬೋಧನಾ ಅವಧಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಮಿತಿಗೊಳಿಸಲಾಗಿದ್ದು ವಿಶ್ವವಿದ್ಯಾನಿಲಯಕ್ಕೆ ಇದರಿಂದ ಸಾಕಷ್ಟು ಖರ್ಚು ಕಡಿಮೆ ಆಗಿರುತ್ತದೆ.
3. ವಿಶ್ವವಿದ್ಯಾನಿಲಯದಲ್ಲಿ ವಿದೇಶಿ ವಿದ್ಯಾರ್ಥಿಗಳಿಗಾಗಿ ಬಾಡಿಗೆ ಹಾಸ್ಟೆಲ್ ಕಟ್ಟಡ ಬಳಸಲಾಗುತ್ತಿದ್ದು, ದಿನಾಂಕ 01.04.2024 ರಿಂದ ಬಾಡಿಗೆ ಕಟ್ಟಡವನ್ನು ಬಳಸುತ್ತಿಲ್ಲ. ಇದರಿಂದಾಗಿ ವಾರ್ಷಿಕ ಅಂದಾಜು ರೂ.30.00 ಲಕ್ಷಗಳಷ್ಟು ಉಳಿತಾಯವಾಗಿದೆ.
4. ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿದ್ದ ಸುಮಾರು 90 ಸ್ಥಿರ ದೂರವಾಣಿ ಸಂಪರ್ಕಗಳನ್ನು BSNL ಗೆ ಹಿಂದಿರುಗಿಸಿದ್ದು, ಇದರಿಂದಾಗಿ ವಾರ್ಷಿಕ ಅಂದಾಜು ರೂ.4.5 ಲಕ್ಷಗಳಷ್ಟು ವೆಚ್ಚ ಕಡಿಮೆ ಆಗಲಿದೆ.
5. ಇ-ಆಫೀಸ್ ತಂತ್ರಾಂಶವನ್ನು ಕುಲಸಚಿವರ ಕಛೇರಿಯಲ್ಲಿ ಮತ್ತು ವಿವಿಧ ವಿಭಾಗಗಳಲ್ಲಿ ಬಳಸುತ್ತಿರುವುದರಿಂದ ಪೇಪರ್/ ಕಾಟ್ರೇಡ್ಜ್‌ನ (Cartridge) ಬಳಕೆ ಕಡಿಮೆ ಆಗಿದೆ.
6. ವಿಶ್ವವಿದ್ಯಾನಿಲಯಕ್ಕೆ ಆಗಮಿಸುವ ಅತಿಥಿಗಳಿಗೆ ಬೊಕ್ಕೆ/ ಶಾಲು/ ಹಾರ ನೀಡದೆ ವಿಶ್ವವಿದ್ಯಾನಿಲಯದಿಂದ ಪ್ರಕಟಿತ ಕೃತಿಗಳನ್ನು ಸ್ಮರಣಿಕೆ ರೂಪದಲ್ಲಿ ನೀಡಲಾಗುತ್ತಿದೆ.
7. ಗ್ರಂಥಾಲಯ ಹೊರತುಪಡಿಸಿ, ಉಳಿದ ವಿಭಾಗಗಳಿಗೆ ವೃತ್ತ ಪತ್ರಿಕೆ ಪೂರೈಕೆ ನಿಲ್ಲಿಸಲಾಗಿದೆ.
8. ವಿದ್ಯುಚ್ಛಕ್ತಿ/ ನೀರಿನ ಮಿತವ್ಯಯ ಸಾಧಿಸಲಾಗುತ್ತಿದೆ.
9. ವಿವಿಧ ಕಾರ್ಯಕ್ರಮಗಳಿಗೆ ತಗಲುವ ವೆಚ್ಚದಲ್ಲಿ ಗಣನೀಯ ಕಡಿತ ಮಾಡಲಾಗುತ್ತಿದೆ. ಇದರಿಂದಾಗಿ ವೆಚ್ಚವನ್ನು ನಿಯಂತ್ರಿಸಲಾಗುವುದು ಹಾಗೂ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ಇನ್ನೂ ಪರಿಣಾಮಕಾರಿಯಾಗಿ ಮಿತವ್ಯಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

ಮುಂದುವರೆದು, ಉನ್ನತ ಶಿಕ್ಷಣ ಇಲಾಖೆಯ ಎಲ್ಲಾ ವಿಶ್ವವಿದ್ಯಾಲಗಳಿಗೂ ಈ ಕೆಳಕಂಡಂತೆ ಕ್ರಮಕ್ಕಾಗಿ ಸೂಚಿಸಲಾಗುತ್ತಿದೆ:-

1. ವಿಶ್ವವಿದ್ಯಾಲಯಗಳು ತನ್ನ ಆಂತರಿಕ ಸಂಪನ್ಮೂಲದ ಹೆಚ್ಚು ಮೊತ್ತವನ್ನು ಅತಿಥಿ ಉಪನ್ಯಾಸಕರು/ಹೊರಗುತ್ತಿಗೆ/ತಾತ್ಕಾಲಿಕ/ಬೋಧಕೇತರ ಸಿಬ್ಬಂದಿಯ ವೇತನ/ಕಛೇರಿ ನಿರ್ವಹಣೆಗಾಗಿ ವೆಚ್ಚ ಮಾಡಲಾಗುತ್ತಿರುವ ಅಸಮಾನ (disproportionately high) ವೆಚ್ಚವನ್ನು ತರ್ಕಬದ್ಧಗೊಳಿಸುವಂತೆ ಹಾಗೂ ಅನಗತ್ಯ ವೆಚ್ಚಗಳನ್ನು ನಿಯಂತ್ರಿಸಲು ಮೊದಲಿಗೆ ಜರೂರು ಕ್ರಮವಹಿಸುವಂತೆ;
2. ವಿಶ್ವವಿದ್ಯಾಲಯಗಳು ತಾತ್ಕಾಲಿಕ ಬೋಧಕ ಸಿಬ್ಬಂದಿಗಳು ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸುವ ಮೂಲಕ ಈ ಸಂಬಂಧ ಮಾಡಲಾಗುತ್ತಿರುವ ವೆಚ್ಚವನ್ನು ಕಡಿಮೆ ಮಾಡುವ ಕುರಿತು ಮೊದಲು ಕ್ರಮಕೈಗೊಳ್ಳುವಂತೆ;
3. ವಿಶ್ವವಿದ್ಯಾಲಯಗಳು ತನ್ನ ಆಂತರಿಕ ಸಂಪನ್ಮೂಲಗಳಿಂದ ಶಾಸನಬದ್ಧ ಹೊಣೆಗಾರಿಕೆಗಳ (ಪಿಂಚಣಿ ಇತ್ಯಾದಿ) ವೆಚ್ಚಗಳನ್ನು ಪಾವತಿಸಲು ಪ್ರಥಮದಲ್ಲಿ ಅವಕಾಶ ಕಲ್ಪಿಸಿಕೊಳ್ಳುವುದು;
4. ತದನಂತರವೇ ಇತರೆ ಹೆಚ್ಚುವರಿ ವೆಚ್ಚಗಳಿಗೆ ಅವಕಾಶ ಮಾಡಿಕೊಳ್ಳುವುದು;
5. ಈ ರೀತಿ ಕ್ರಮವಹಿಸಿದ ತರುವಾಯ ಅವಶ್ಯವಿರುವ ಹೆಚ್ಚುವರಿ ಪಿಂಚಣಿ ಅನುದಾನಕ್ಕೆ ಸೂಕ್ತ ಪ್ರಾಧಿಕಾರಗಳ ಪೂರ್ವಾನುಮೋದನೆಯೊಂದಿಗೆ ಸೂಕ್ತ ಕಾರಣಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು;

ಸಂಖ್ಯೆ: ಇಡಿ 73 ಹೆಚ್‌ಪಿಯು 2025)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು.